O.S . No.294/16 D.W. 1 Dated :24-04-2024.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು: ಶ್ರೀ. ಬಿ.ಡಿ.ಎಸ್. ವಕೀಲರಿಂದಃ

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ , ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಒಪ್ಪಿಕೊಂಡಿದ್ದು , ಸದರಿ ದಾಖಲೆಯು ನಾನು ಪ್ರತಿವಾದಿಯ ವಿರುದ್ಧ ಹೂಡಿದ ದಾವಾ ನಂ.124/2016 ರ ವಾದಪತ್ರದ ದೃಢೀಕೃತ ನಕಲಾಗಿದ್ದು , ಸದರಿ ದಾಖಲೆಯನ್ನು ನಿ.ಪಿ-12 ಎಂದು ಗುರುತಿಸಲಾಯಿತು. ನಿಪಿ-12 ರಲ್ಲಿ ಸ.ನಂ.71/2 ರ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತು ಎಂದು ನಮೂದಿಸಿ ದಾವೆ ಹೂಡಿರುತ್ತೇನೆಂದರೆ ಸರಿ . ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯಲ್ಲಿ ನಾನು ದಾವಾ ಸ್ವತ್ತಿನಲ್ಲಿ ಸುಮಾರು 60 ವರ್ಷಗಳಿಂದ ಸ್ವಾಧೀನದಲ್ಲಿರುತ್ತೇನೆ ಎಂದು ಹೇಳಿರುತ್ತೇನೆ. ದಾವಾ ಸ್ವತ್ತನ್ನು ನಮ್ಮ ಮಾವ ಶಾಂತಮಲ್ಲಯ್ಯನವರು ಖರೀದಿ ಮಾಡಿದ್ದು, ಖರೀದಿಯ ಆಧಾರದ ಮೇಲೆ ದಾವಾ ಸ್ವತ್ತಿನ ಸ್ವಾಧೀನವನ್ನು ಹೊಂದಿರುತ್ತೇನೆ. ನನ್ನ ಲಿಖಿತ ವಾದಪತ್ರದಲ್ಲಿ ಹಾಗೂ ಎದುರು ವಾದಪತ್ರದಲ್ಲಿ ದಾವಾ ಸ್ವತ್ತಿನಲ್ಲಿ ನಾನು ಪ್ರತಿಕೂಲ ಸ್ವಾಧೀನವನ್ನು ಹೊಂದಿದ್ದೇನೆ ಎಂದು ನಮೂದಿಸಿಕೊಂಡಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ನಾವು ಪ್ರತಿಕೂಲ ಸ್ವಾಧೀನದಲ್ಲಿರುತ್ತೇವೆ ಎಂದು ನಮ್ಮ ವಕೀಲರಿಗೆ ಮಾಹಿತಿ ನೀಡಿರುವುದಿಲ್ಲ. ಎದುರು ದಾವೆಯಲ್ಲಿ ನಾನು ಕೋರಿರುವಂತೆ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ಏಪ್ರಿಲ್-2016 ರಂದು 4 ಮತ್ತು 5 ನೇ ಪ್ರತಿವಾದಿಗಳ ಜೊತೆ ಷರೀಖಾಗಿ ವಾದಿಯಿಂದ ದಾವಾ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಸುಮಾರು 60 ವರ್ಷಗಳಿಂದ ನಾವು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಎಂ ಆರ್ ನಂ 1/89-90 ರಲ್ಲಿ ನಮೂದಾಗಿರುವ ಅಕ್ರಮ ಖಾತೆಯನ್ನು ದುರುಪಯೋಗಪಡಿಸಿಕೊಂಡು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಹಣಿ ಅಥವಾ ಮ್ಯುಟೇಶನ್ ಆಧಾರದ ಮೇಲೆ

ನನಗಾಗಲೀ , ನನ್ನ ಗಂಡನಿಗಾಗಲೀ ಯಾವುದೇ ಹಕ್ಕು ಹಸ್ತಾಂತರವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮಾವ ಶಾಂತಮಲ್ಲಯ್ಯನವರು ದಾವಾ ಸ್ವತ್ತನ್ನು ಖರೀದಿ ಮಾಡಿರುವ ಬಗ್ಗೆ ಕ್ರಯಪತ್ರವನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.